**ಔಷಧಿಗಿಂತಲೂ ಮುನ್ನೆಚ್ಚರಿಕೆ ಒಳ್ಳೆಯ ಮದ್ದು ಎನ್ನುವ ಮಾತು 'ಹನಿ ಟ್ರ್ಯಾಪ್'ಗೂ ಅನ್ವಯಿಸುತ್ತದೆ. ನಮ್ಮ ಸಾಮಾಜಿಕ ನಡವಳಿಕೆಯಲ್ಲಿ ನೈತಿಕತೆ ಹಾಸುಹೊಕ್ಕಾಗಿದ್ದಾಗ ಹನಿ ಟ್ರ್ಯಾಪ್‌ನಂತಹ ಬಿಕ್ಕಟ್ಟುಗಳಿಗೆ ಅವಕಾಶವೇ ಇಲ್ಲ. ನೈತಿಕ ಭ್ರಷ್ಟತೆಯೇ ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ಮೂಲ.**





ಮಾಹಿತಿಯನ್ನು ಕಲೆ ಹಾಕಲಾಯಿತು.

ಇಷ್ಟು ಮಾತ್ರವಲ್ಲ, ಸೇನೆಯ ನರ್ಸಿಂಗ್ ವಿಭಾಗದ ಕ್ಯಾಪ್ಟನ್ ಎಂದು ಹೇಳಿಕೊಂಡಿದ್ದ ಐಎಸ್ಐ ಏಜೆಂಟ್ ಒಬ್ಬಳು ಬರೋಬ್ಬರಿ 20 ಸೈನಿಕರನ್ನು ತನ್ನ ಬಲೆಗೆ ಬೀಳಿಸಿಕೊಂಡಿದ್ದಳು. ಇದು ದೊಡ್ಡ ಮಟ್ಟ ಸುದ್ದಿಯಾಯಿತು. ತಕ್ಷಣವೇ ಎಚ್ಚೆತ್ತುಕೊಂಡ ಸೇನಾಧಿಕಾರಿಗಳು, ಅಪರಿಚಿತ ಸಂಖ್ಯೆಯಿಂದ ಯಾರೆಲ್ಲರಿಗೆ ಕರೆ ಹಾಗೂ ಸಂದೇಶಗಳು ಬಂದಿವೆ ಎಂಬ ಮಾಹಿತಿ ಕಲೆಹಾಕಲಾರಂಭಿಸಿದರು.

ಸಿಪಾಯಿಯ ಮೊಬೈಲ್‌ನ 'ಐಪಿ' (ಇಂಟರ್‌ನೆಟ್ ಪ್ರೊಟೊಕಾಲ್) ಸಂಖ್ಯೆ ಪಡೆದು, ಅದಕ್ಕೊಂದು ಮಾಲ್‌ವೇರ್ ಬಿಡಲಾಗಿತ್ತು. ವಿನಯಾ ಶರ್ಮ ಎನ್ನುವ ಹೆಣ್ಣಿನಿಂದ ಸಿಪಾಯಿಗೆ ಬರುತ್ತಿದ್ದ ಕರೆ ಹಾಗೂ ಸಂದೇಶಗಳು ಪಾಕಿಸ್ತಾನದ ಸರ್ವರ್‌ನಿಂದ ಆಪರೇಟ್ ಆಗುತ್ತಿದ್ದವು. ಆದರೆ ಅಸಲಿಗೆ ಅವು ಅಮೆರಿಕದಲ್ಲಿದ್ದ ಪ್ರಾಕ್ಸಿ ಸರ್ವರ್‌ನಿಂದ ಚಿಮ್ಮುತ್ತಿದ್ದವು. ಯೋಜನೆಯ ಉದ್ದೇಶ ಸಿಪಾಯಿಯಿಂದ ಸಾಕಷ್ಟು ಮಾಹಿತಿಯನ್ನು ಕಲೆ ಹಾಕುವುದು, ಆತನಿಗೆ ಸಾಕಷ್ಟು ಹಣ ನೀಡಿ ತಮ್ಮ ವಶದಲ್ಲಿಟ್ಟುಕೊಳ್ಳುವುದಾಗಿತ್ತು. ಪ್ರೇಮಪಾಶಕ್ಕೆ ಸಿಲುಕಿದ್ದ ಸಿಪಾಯಿ ವಿರುದ್ಧ ಸೇನಾ ವಿಚಾರಣೆ ನಡೆದವು. ಆತನ ಸೇನಾ ವೃತ್ತಿ ಅಲ್ಲಿಗೆ ಕೊನೆಗೊಂಡಿತು.

## ಸಾಮಾಜಿಕ ತಾಣಗಳೆಂಬ ಬಲೆಗಳು

'ಹನಿ ಟ್ರ್ಯಾಪ್' ಇಂದು ಹೊಸ ಸ್ವರೂಪವನ್ನು ಪಡೆದುಕೊಂಡಿದೆ. ತಂತ್ರಜ್ಞಾನ ಬೆಳೆದಂತೆಲ್ಲ, ಅದರಲ್ಲೂ ಡಿಜಿಟಲ್ ತಂತ್ರಜ್ಞಾನ ಬೆಳೆದಂತೆ ಇಂಥ ವಂಚಕರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿದೆ. ಅಂತರ್ಜಾಲದಿಂದ ಇಡೀ ವಿಶ್ವವೇ ಒಂದು ಹಳ್ಳಿಯಂತಾಗಿದೆ. ಆ ಡಿಜಿಟಲ್ ಹಳ್ಳಿಯಲ್ಲಿರುವ ನಾವು ತುಸು ಯಾಮಾರಿದರೂ ನೇರವಾಗಿ ಖೆಡ್ಡಾಕ್ಕೆ. ಜನಪ್ರಿಯ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್ ಇತ್ಯಾದಿಗಳಲ್ಲಿ 'ಹನಿ ಟ್ರ್ಯಾಪ್' ಖಾತೆಗಳ ಮೂಲಕ ಕೆಲವರು ಬಲೆ ಹಾಕಿರುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಇವು ಮಹಿಳೆಯರ ಹೆಸರಿನಲ್ಲಿರುವ ಖಾತೆಗಳೇ ಆಗಿರುತ್ತವೆ. ಸ್ನೇಹಕ್ಕಾಗಿ ಕೈಚಾಚುವ ಇಂಥ ಖಾತೆಗಳು ನಂತರ ಅಮೂಲ್ಯ ಮಾಹಿತಿಯನ್ನು ಕಬಳಿಸುವುದರೊಂದಿಗೆ ಕೊನೆಯಾಗುತ್ತವೆ. ಇದರಲ್ಲಿ ಬ್ಯಾಂಕಿಂಗ್ ವಂಚನೆಗಳೂ ಸೇರಿವೆ.

ಭಾರತದ ರಕ್ಷಣಾ ಇಲಾಖೆಯು ದೇಶದ ಭದ್ರತೆಗೆ ಅಪಾಯ ತಂದೊಡ್ಡಬಲ್ಲ 89 ಆ್ಯಪ್‌ಗಳನ್ನು ತನ್ನ ಅಧಿಕಾರಿ ಹಾಗೂ ಸೈನಿಕರ ಮೊಬೈಲ್‌ಗಳಿಂದ ಅಳಿಸಿಹಾಕಿಸಿದೆ. ಡೈಲಿ ಹಂಟ್‌ನಂತ ಸುದ್ದಿ ಆ್ಯಪ್, ಟಿಂಡರ್, ಫೇಸ್‌ಬುಕ್, ಟಿಕ್‌ಟಾಕ್, ಝೂಮ್ ಹಾಗೂ ಪಬ್‌ಜಿಯಂತ ಗೇಮಿಂಗ್ ಆ್ಯಪ್‌ಗಳನ್ನು ಡಿಲೀಟ್ ಮಾಡಿಸಿದೆ. ಸೇನೆಯಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಹನಿ ಟ್ರ್ಯಾಪ್ ನಡೆಯುವುದನ್ನು ತಡೆಯಲು ಕಾಲಕಾಲಕ್ಕೆ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಅಂತರ್ಜಾಲ ಜಗತ್ತಿನಿಂದ ಎಷ್ಟು ಉಪಯೋಗ ಇದೆಯೋ ಅಷ್ಟೇ ಅಡ್ಡ ಪರಿಣಾಮಗಳೂ ಇವೆ. ಅಂಥ ಅಡ್ಡ ಪರಿಣಾಮಗಳಲ್ಲೊಂದು, 'ಹನಿ ಟ್ರ್ಯಾಪಿಂಗ್'. ವ್ಯಕ್ತಿಯನ್ನು ಲೈಂಗಿಕವಾಗಿ ಸೆಳೆದು ಮೋಸಗೊಳಿಸುವ ಅನಾದಿ ಕಾಲದಿಂದಲೂ ಬಳಕೆಯಲ್ಲಿರುವ ತಂತ್ರಕ್ಕೆ ಅಂತರ್ಜಾಲ ಹೊಸ ಪೋಷಾಕು ನೀಡಿದೆ. ಕೆಲವರು ಅರಿತೂ ಅರಿತೂ ದುಸ್ಸಾಹಸಕ್ಕೆ ಮುಂದಾಗಿ ಅಪಾಯಕ್ಕೆ ಸಿಲುಕುತ್ತಾರೆ. ಮತ್ತೆ ಕೆಲವರು ತಮಗರಿವಿಲ್ಲದಂತೆಯೇ ವಂಚಕರ ಜಾಲಕ್ಕೆ ಬಲಿಯಾಗುತ್ತಾರೆ. ಅನಗತ್ಯ ಕುತೂಹಲ ಹಲವು ಸಂದರ್ಭಗಳಲ್ಲಿ ಅಪಾಯವನ್ನು ತಂದೊಡ್ಡಬಲ್ಲದು.

ದುಸ್ಸಾಹಸವೋ ಅಮಾಯಕತೆಯೋ, ಒಂದು ವೇಳೆ 'ಹನಿ ಟ್ರ್ಯಾಪ್'ಗೆ ಯಾರಾದರೂ ಒಳಗಾದಲ್ಲಿ, ಅವರು ಪೊಲೀಸರ ನೆರವು ಪಡೆಯುವುದು ಅಗತ್ಯ. ಪೊಲೀಸರು ಕೂಡ ಇಂಥ ಪ್ರಕರಣಗಳ ತನಿಖೆಯನ್ನು ರಹಸ್ಯವಾಗಿಯೇ ನಡೆಸುತ್ತಾರೆ.

ಆರೋಗ್ಯ ಕಾಪಾಡಿಕೊಳ್ಳಲು ಔಷಧಿಗಿಂತಲೂ ಮುನ್ನೆಚ್ಚರಿಕೆಯೇ ಒಳ್ಳೆಯ ಮದ್ದು ಎನ್ನುವ ಮಾತು 'ಹನಿ ಟ್ರ್ಯಾಪ್'ಗೆ ಸಂಬಂಧಿಸಿದಂತೆಯೂ ಅನ್ವಯಿಸುತ್ತದೆ. ನೈತಿಕ ಎಚ್ಚರ ಜಾಗೃತವಾದಲ್ಲಿ ಇಂಥ ಪ್ರಸಂಗಗಳಿಗೆ ಜೀವನದಲ್ಲಿ ಅವಕಾಶವೇ ಇಲ್ಲ. ಒಂದು ವೇಳೆ ನಮಗೆ ಅರಿವಿಲ್ಲದಂತೆಯೇ ವಂಚನೆಯ ಸುಳಿಗಳಿಗೆ ಸಿಲುಕಿಕೊಂಡರೂ ಅದರಿಂದ ಹೊರಬರಲು ನೈತಿಕಧೈರ್ಯವೇ ಬಲನೀಡುತ್ತದೆ.

ಪ್ರತಿಕ್ರಿಯಿಸಿ: feedback@sudha.co.in